ಸೌತಡ್ಕ ಶ್ರೀ ಗಣಪತಿ ದೇವಾಲಯ

172 : (281)

ಶ್ರೀ ವಸಂತ ಬಂಗೇರ ಕೆ (ಬೆಳ್ತಂಗಡಿ)

ಅ) 2010–11 ಮತ್ತು 2011–12ನೇ ಸಾಲಿನಲ್ಲಿ ಬೆಳ್ತಂಗಡಿ ತಾಲ್ಲೂಕು ಕೊಕ್ಕಡ ಗ್ರಾಮದಲ್ಲಿರುವ ಸೌತಡ್ಕ ಶ್ರೀ ಗಣಪತಿ ದೇವಾಲಯದ ಈವರೆಗಿನ ಜಮಾ ಖರ್ಚಿನ ಮೊತ್ತವೆಷ್ಟು (ತಿಂಗಳವಾರು ವಿವರ ನೀಡುವುದು)

ಆ) ದೇವಸ್ಥಾನದ ಆಡಳಿತಾಧಿಕಾರಿಯಾಗಿದ್ದ ತಾಲ್ಲೂಕು ಪಂಚಾಯತ್ ಕಾರ್ಯನಿರ್ವಹಣಾಧಿಕಾರಿಯನ್ನು ಬದಲಿಸಿ ಸಹಾಯಕ ತೋಟಗಾರಿಕೆ ಅಧಿಕಾರಿಯವರನ್ನು ನೇಮಿಸಲು ಕಾರಣವೇನು, ಸದರಿ ದೇವಸ್ಥಾನದ ಸ್ಥಿರಾಸ್ತಿ ಮತ್ತು ಚರಾಸ್ತಿ ಎಷ್ಟು (ವಿವರ ನೀಡುವುದು) ?

ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಗಳು)

ಅ) ಈ ಸಂಬಂಧದ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ತಾಲ್ಲೂಕು ಪಂಚಾಯತ್ ಕಾರ್ಯನಿರ್ವಹಣಾಧಿಕಾರಿ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ತೋಟಗಾರಿಕೆ ಇಲಾಖೆಯ ಅಧಿಕಾರಿಯಾದ ಶ್ರೀ ಸದಾಶಿವ್‌ರಾವ್ ಇವರನ್ನು ದೇವಸ್ಥಾನದ ಆಡಳಿತಾಧಿಕಾರಿಯಾಗಿ ಹೆಚ್ಚುವರಿ ಪ್ರಭಾರದಲ್ಲಿ ಇರಿಸಲಾಗಿತ್ತು. ತರುವಾಯ ತಾಲ್ಲೂಕು ಪಂಚಾಯತ್ ಕಾರ್ಯನಿರ್ವಹಣಾಧಿಕಾರಿ ಹುದ್ದೆಗೆ ಬೇರೆ ಅಧಿಕಾರಿ ಹಾಜರಾದ ಕಾರಣ ಅವರಿಗೆ ಹುದ್ದೆಯ ಪ್ರಭಾರವನ್ನು ಹಸ್ತಾಂತರಿಸಲಾಗಿತ್ತು. ಆದರೆ, ಈ ಹಿಂದೆ ಇದ್ದ ಆಡಳಿತಾಧಿಕಾರಿಗಳು ದೇವಸ್ಥಾನದ ಆಡಳಿತ ನಿರ್ವಹಣೆಯನ್ನು ಉತ್ತಮವಾಗಿ ನಿರ್ವಹಿಸಿರುವುದಾಗಿ ತಿಳಿಸಿ. ಅವರನ್ನೇ ಮುಂದುವರಿಸುವಂತೆ ಮಾಜಿ ಆಡಳಿತ ಮೊಕ್ತೇಸರರು ಕೋರಿಕೆ ಸಲ್ಲಿಸುವುದರ ಜೊತೆಗೆ ಜಿಲ್ಲಾಧಿಕಾರಿ, ದಕ್ಷಿಣ ಕನ್ನಡ ಇವರು ಶಿಫಾರಸ್ಸು ಮಾಡಿದ್ದರಿಂದ ಜೊತೆಗೆ ಜಿಲ್ಲಾಧಿಕಾರಿ, ದಕ್ಷಿಣ ಕನ್ನಡ ಇವರು ಶಿಫಾರಸ್ಸು ಮಾಡಿದ್ದರಿಂದ ಧಾರ್ಮಿಕ ದತ್ತಿ ಆಯುಕ್ತರ ಆದೇಶ ಸಂಖ್ಯೆ : ಎಡಿಎಂ 8 ಸಿಆರ್ (2) 218/11–12, ದಿನಾಂಕ:28–11–2011ರಲ್ಲಿ ಶ್ರೀ ಸದಾಶಿವರಾವ್ ಇವರನ್ನು ನೇಮಿಸಲಾಗಿದೆ.

ದೇವಸ್ಥಾನದ ಸ್ಥಿರಾಸ್ತಿ ಮತ್ತು ಚರಾಸ್ತಿಯ ವಿವರ ಈ ಕೆಳಗಿನಂತಿದೆ.

ಸ್ಥಿರಾಸ್ತಿ:

ಬೆಳ್ತಂಗಡಿ ತಾಲ್ಲುಕು ಕೊಕ್ಕಡ ಗ್ರಾಮದಲ್ಲಿ 3.18 ಎಕೆರೆ ಜಮೀನು ಹಾಗೂ ಕೆಲವು ಕಟ್ಟಡ.

ಚರಾಸ್ತಿಯ ವಿವರ:–

ಚಿನ್ನದ ಸೊತ್ತುಗಳ ಒಟ್ಟು ತೂಕ : 145.650 ಗ್ರಾಂ. ಬೆಳ್ಳಿಯ ಸೊತ್ತುಗಳ ಒಟ್ಟು ತೂಕು : 20.775 ಕೆಜಿ

ಅನುಬಂಧ

ವಿಧಾನ ಸಭಾ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 281 ಕ್ಕೆ

ತಿಂಗಳು	ಜಮಾ (ರೂ.ಗಳಲ್ಲಿ)	ಖರ್ಚು (ರೂ.ಗಳಲ್ಲಿ)
2010–11		
ಏಪ್ರಿಲ್	8,46,267–00	5,64,472–00
ಮೇ	8,78,788–00	6,00,183–00
ಜೂನ್	7,19,828–00	6,68,011–00
ಜುಲೈ	4,98,824–00	3,68,111–00
ಆಗಸ್ಟ್	5,16,494–00	4,37,304–00
ಸೆಪ್ಟೆಂಬರ್	18,20,720–00	9,33,506–00
ಅಕ್ಟೋಬರ್	7,30,173–00	13,12,129–00
ನವೆಂಬರ್	7,11,101–00	7,88,172–00
ಡಿಸೆಂಬರ್	8,26,271–00	5,96,765–00
ಜನವರಿ	8,45,082–00	12,41,933–00
ಫೆಬ್ರವರಿ	8,19,466–00	8,95,361–00
ಮಾರ್ಚ್	8,70,769–00	9,16,119–00
ಒಟ್ಟು	**1,00,83,783–00**	**93,22,066–00**
2011–12		
ಏಪ್ರಿಲ್	9,78,658–00	4,92,095–00
ಮೇ	12,04,110–00	8,88,670–00
ಜೂನ್	8,95,843–00	6,33,288–00
ಜುಲೈ	8,64,594–00	6,25,798–00
ಆಗಸ್ಟ್	7,88,242–00	7,67,804–00
ಸೆಪ್ಟೆಂಬರ್	12,93,664–00	8,35,805–00
ಅಕ್ಟೋಬರ್	13,22,242–00	35,02,833–00
ನವೆಂಬರ್	11,34,682–00	6,57,415–00
ಡಿಸೆಂಬರ್	11,70,107–00	10,30,541–00
ಜನವರಿ	14,14,694–00	9,00,157–00
ಫೆಬ್ರವರಿ	11,75,019–00	37,93,350–00
ಒಟ್ಟು	**1,22,41,855–00**	**1,41,27,856–00**